ಓ.ಎಸ್. ನಂಃ 310/2015

ಡಿ. ಡಬ್ಲ್ಯೂಃ 1

**ದಿನಾಂಕ 22.01.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಎಚ್.ಕೆ.ಎಚ್ ವಕೀಲರಿಂದಃ**

1. ನಾನು 2 ನೆ ತರಗತಿಯವೆರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ವಾದಿ ಬಾಚಹಳ್ಳಿ ಗ್ರಾಮದವರು ಎಂದರೆ ಸರಿ. 2 ನೇ ಪ್ರತಿವಾದಿಯು ಎಲೆಮುದ್ದನಹಳ್ಳಿ ಗ್ರಾಮದವರು ಎಂದರೆ ಸರಿ. ದಾವಾ ಆಸ್ತಿಯಾದ 14 ಗುಂಟೆ ಜಮೀನನ್ನು ವಾದಿ ಮತ್ತು 2 ನೇ ಪ್ರತಿವಾದಿ ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ವಾದಿಯ ಹೆಸರಿನಲ್ಲಿ ಎಷ್ಟು ಸಂಖ್ಯೆಯಲ್ಲಿ ಬ್ಯಾರನ್ ಲೈಸನ್ಸಗಳಿವೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಎರಡು ಬ್ಯಾರನ್ ಮನೆಗಳಿವೆ. ವಾದಿಗೆ ಸೇರಿದ ಎಷ್ಟು ಜಮೀನುಗಳಿವೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ತೆಂಗು ಮತ್ತು ಅಡಿಕೆ ತೋಟಗಳಿವೆ ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ.

2. ವಾದಿಯ ಬಾಚಹಳ್ಳಿ ಗ್ರಾಮದ ಮುಖಂಡರಾಗಿದ್ದರು ಎಂದರೆ ಸರಿ. ವಾದಿಯ ಗ್ರಾಮದ ಮುಖಂಡನಾಗಿದ್ದು ಅವರು ಗ್ರಾಮದ ಬಡ ಜನರಿಗೆ ಹಣಕಾಸಿನ ಸಹಾಯವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ಆರ್ಥಿಕ ಸಾಮಥ್ಯವು ಚೆನ್ನಾಗಿದೆ ಎಂದರೆ ಸರಿ. ಆದ್ದರಿಂದ ವಾದಿಗೆ ಬೇರೆಯವರಿಂದ ಸಾಲ ಪಡೆಯುವ ಅಗತ್ಯವಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ವಾದಿಗೆ ಸೇರಿದ ಇನ್ನೊಂದು ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ವಾದಿಯು ಖರೀದಿ ಮಾಡಿರುತ್ತಾರೆ ಎಂದು ಸ್ವತಃಹ ನುಡಿದಿರುತ್ತಾರೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ 2 ನೇ ಪ್ರತಿವಾದಿಗೆ ಸೇರಿದ ಜಮೀನು ಇದೆ ಎಂದರೆ ಸರಿ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ವಾದಿ ಮತುತ 2 ನೇ ಪ್ರತಿವಾದಿಗೆ ಸೇರಿದ ಜಮೀನುಗಳಿದ್ದು ದಾವಾ ಆಸ್ತಿಯ ಪಕ್ಕದಲ್ಲಿರುವ ತಮ್ಮ ಸದರಿ ಜಮೀನುಗಳಿಗೆ ಹೋಗಿ ಬರಲು ಅನುಕೂಲವಾಗುವಂತೆ ದಾವಾ

ಆಸ್ತಿಯಲ್ಲಿ ರಸ್ತೆ ಇದ್ದ ಕಾರಣ ವಾದಿ ಮತ್ತು 2 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ವಾದಿಗೆ ಸೇರಿದ ಜಮೀನು ಇದೆ ಎಂದರೆ ಸಾಕ್ಷಿಯು ನಾವು ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ವಾದಿಯ ಖರೀದಿ ಮಾಡಿರುತ್ತಾರೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ. ದಾವಾ ಬಿ ಅನುಸೂಚಿ ಆಸ್ತಿಯನ್ನು ನೀವು ಖರೀದಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

5. ಸರ್ವೇ ನಂಬರ 34/26 ರಲ್ಲಿ 2 ನೇ ಪ್ರತಿವಾದಿಗೆ ಸೇರಿದ 2 ಗುಂಟೆ ಜಮೀನು ಇದೆ ಎಂದರೆ ಸರಿ. ವಾದಿ ಮತ್ತು 2 ನೇ ಪ್ರತಿವಾದಿ ದಾವಾ ಆಸ್ತಿಯಾದ 14 ಗುಂಟೆ ಜಮೀನಿನ ಜಂಟಿ ಸ್ವಾಧೀನದಲ್ಲಿ ಇದ್ದರುಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯಾದ 14 ಗುಂಟೆ ಜಮೀನನ್ನು ವಾದಿ ಮತ್ತು 2 ನೇ ಪ್ರತಿವಾದಿ ಜಂಟಿಯಾಗಿ ಖರೀದಿ ಮಾಡಿರುವ ಕಾರಣ ಅವರು ದಾವಾ ಆಸ್ತಿಯ ಜಂಟಿ ಸ್ವಾಧೀನದಲ್ಲಿ ಇದ್ದರು ಎಂದು ಸ್ವತಃ ನುಡಿದಿರುತ್ತಾರೆ. 2 ನೇ ಪ್ರತಿವಾದಿಯ ಮರಣದ ನಂತರ ಅವರ ವಾರಸುದಾರರಾದ ನಾವು ವಾದಿಯೊಂದಿಗೆ ದಾವಾ ಆಸ್ತಿಯಾದ 14 ಗುಂಟೆ ಜಮೀನಿನ ಜಂಟಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ.

6. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 2 ನೇ ಪ್ರತಿವಾದಿ ಶಾಮೀಲಾಗಿ ಮೋಸದಿಂದ ದಾವಾ ಬಿ ಅನುಸೂಚಿ ಆಸ್ತಿಯನ್ನು ನಮ್ಮ ಹೆಸರಿಗೆ ವರ್ಗಾಯಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮೋಸದಿಂದ ದಾವಾ ಬಿ ಅನುಸೂಚಿ ಆಸ್ತಿಯನ್ನು ನನ್ನ ಹೆಸರಿಗೆ ವರ್ಗಾಯಿಸಿರುವುದನ್ನು ಮನಗಂಡು ಅದನ್ನು ರದ್ದುಪಡಿಸುವಂತೆ ವಾದಿಯು ನನ್ನಲ್ಲಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಕೋರಿಕೆಯ ಮೇರೆಗೆ ನಾನು ದಾವಾ ಬಿ ಅನುಸೂಚಿ ಆಸ್ತಿಯ ಖಾತೆಯನ್ನು ರದ್ದುಪಡಿಸದ ಕಾರಣ, ವಾದಿಯು ಹುಣಸೂರಿನ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿ ನನ್ನ ಹೆಸರಿಗೆ ಆದ ದಾವಾ ಬಿ ಅನುಸೂಚಿ ಆಸ್ತಿಯ ಖಾತೆಯನ್ನು ರದ್ದು ಪಡಿಸುವಂತೆ ಆರ್ ಎ ಸಂಖ್ಯೆ 124/2011-12 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿಯು ಸಲ್ಲಿಸಿದ್ದ ಸದರಿ ಮೇಲ್ಮನವಿಯನ್ನು

ಪುರಸ್ಕರಿಸಿ ಹುಣಸೂರಿನ ಉಪವಿಭಾಗಾಧಿಕಾರಿಯವರನನ್ನ ಹೆಸರಿಗೆ ಆದ ದಾವಾ ಬಿ ಅನುಸೂಚಿ ಆಸ್ತಿಯ ಖಾತೆಯನ್ನು ರದ್ದು ಪಡಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

7. ಹುಣಸೂರಿನ ಉಪವಿಭಾಗಾಧಿಕಾರಿಯವರ ನ್ಯಾಯಾಲಯದ ಮೇಲ್ಮನವಿ ಸಂಖ್ಯೆ 124/2011-12 ರ ಪ್ರಕರಣದ ನೋಟೀಸ್ ನನಗೆ ಮತ್ತು 2 ನೇ ಪ್ರತಿವಾದಿಗೆ ತಲುಪಿರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಇದ್ದರು ಸಹ ವಿನಾಕಾರಣ ದಾವಾ ಆಸ್ತಿಗಳ ಮೇಲೆ ಇರುವ ವಾದಿಯಜಂಟಿ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಬಿ ಅನುಸೂಚಿ ಆಸ್ತಿಯನ್ನು ನಾನು ಮನೆಯನ್ನು ಕಟ್ಟಲು ಪ್ರಯತ್ನಿಸಿರುತ್ತೇನೆ ಎಂದರೆ ಸಾಕ್ಷಿಯು ವಾದಿ ಮತ್ತು 2 ನೇ ಪ್ರತಿವಾದಿಯು ದಾವಾ ಬಿ ಅನುಸೂಚಿ ಆಸ್ತಿಯನ್ನು ನನಗೆ ಬರೆದುಕೊಟ್ಟ ಕಾರಣ ನಾನು ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಮನೆ ಕಟ್ಟಲು ಮುಂದಾಗಿರುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನೋಂದಾಣಾಧಿಕಾರಿಗಳ ಕಚೇರಿಯಲ್ಲಿ ವಾದಿ ಮತ್ತು 2 ನೇ ಪ್ರತಿವಾದಿ ನನ್ನ ಹೆಸರಿಗೆ ದಾವಾ ಬಿ ಅನುಸೂಚಿ ಆಸ್ತಿಯನ್ನು ಬರೆದುಕೊಟ್ಟಿರುತ್ತಾರೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ವಾದಿ ಎಂದಿಗೂ ಸಹ ನನಗೆ ದಾವಾ ಬಿ ಅನುಸೂಚಿ ಆಸ್ತಿಯನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

9. ದಾವಾ ಬಿ ಅನುಸೂಚಿ ಆಸ್ತಿಯನ್ನು ವಾದಿ ಮತ್ತು 2 ನೇ ಪ್ರತಿವಾದಿ ನನಗೆ ನೋಂದಣಾಧಿಕಾರಿ ಕಚೇರಿಯಲ್ಲಿ ಬರೆದು ಕೊಟ್ಟಿರುವುದಿಲ್ಲ ಬದಲಾಗಿ ಗ್ರಾಮಸ್ಥರ ಸಮಕ್ಷಮದಲ್ಲಿ ಬರೆದು ಕೊಟ್ಟಿರುತ್ತಾರೆ. ದಾವಾ ಬಿ ಅನುಸೂಚಿ ಆಸ್ತಿಯನ್ನು ವಾದಿ ಮತ್ತು 2 ನೇ ಪ್ರತಿವಾದಿ ನನಗೆ ಪತ್ರದ ಮೂಲಕ ಬರೆದು ಕೊಟ್ಟಾಗ ರಾಮೇಗೌಡ ಮತ್ತು ಕಾಳೇಗೌಡ ಎನ್ನುವವರು ಹಾಜರಿದ್ದರು. ಸದರಿ ಪತ್ರವನ್ನು ವಾದಿ ಮತ್ತು 2 ನೇ ಪ್ರತಿವಾದಿ ನನಗೆ ಮಿರ್ಲೆಸಬ್ ರಿಜಿಸ್ಟ್ರಾರರ್ ಕಚೇರಿಯ ಹೊರಗಡೆ ಬರೆದು ಕೊಟ್ಟಿರುತ್ತಾರೆ. ವಾದಿ ನನಗೆ ದಾವಾ ಬಿ ಅನುಸೂಚಿ ಆಸ್ತಿಯನ್ನು ಬರೆದು ಕೊಡದಿದ್ದರು ಸಹ ಬರೆದುಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾ ಬಿ ಅನುಸೂಚಿ ಆಸ್ತಿಯನ್ನು ವಾದಿ ಮತ್ತು 2 ನೇ ಪ್ರತಿವಾದಿ ನನ್ನ ಹೆಸರಿಗೆ ಬರೆದುಕೊಟ್ಟ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಪತ್ರವನ್ನು ನಾನು ಎಲ್ಲಿ ಇಟ್ಟಿರುತ್ತೇನೆ ಎಂದು ನನಗೆ ಗೊತ್ತಿರದ ಕಾರಣ ಸದರಿ ದಾಖಲೆಯನ್ನು ನನಗೆ ನ್ಯಾಯಾಲಯಕ್ಕೆ ಹಾಜರು ಪಡಿಸಲು ಸಾಧ್ಯವಿಲ್ಲ. ವಾದಿಯಾಗಲಿ ಅಥವಾ 2 ನೇ ಪ್ರತಿವಾದಿಯಾಗಲಿ ಎಂದಿಗೂ ಸಹ ದಾವಾ ಬಿ ಅನುಸೂಚಿ ಆಸ್ತಿಯನ್ನು ನನಗೆ ಬರೆದು ಕೊಡದ ಕಾರಣ ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

11. ವಾದಿ ಮತ್ತು 2 ನೇ ಪ್ರತಿವಾದಿ ನನಗೆ ದಾನ ಪತ್ರದ ಮೂಲಕ ದಾವಾ ಬಿ ಅನುಸೂಚಿ ಆಸ್ತಿಯನ್ನು ನನ್ನ ಹೆಸರಿಗೆ ಬರೆದು ಕೊಟ್ಟಿರುತ್ತಾರೆ. ನಾನು ಕಾನೂನು ಬಾಹಿರವಾಗಿ ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಮನೆ ನಿರ್ಮಾಣ ಮಾಡಲು ಪ್ರಯತ್ನ ಪಟ್ಟಾಗ ವಾದಿ ನನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ ನಂತರ ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುತ್ತದೆ ಎಂದು ಪರಿಹಾರವನ್ನು ನ್ಯಾಯಾಲಯದಲ್ಲಿ ಕಂಡುಕೊಳ್ಳಿ ಎಂದು ಪೊಲೀಸ್ ರು ವಾದಿಗೆ ಹಿಂಬರವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

12. ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಮನೆ ನಿರ್ಮಾಣ ಮಾಡದಂತೆ ಈ ದಾವೆಯಲ್ಲಿ ನ್ಯಾಯಾಲಯವು ಹೊರಡಿಸಿದ ತಡೆಯಾಜ್ಞೆಯ ಬಗ್ಗೆ ನಿಮಗೆ ಮಾಹಿತಿ ಇತ್ತು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ಕೊಟ್ಟಿರುವುದಿಲ್ಲ. ನ್ಯಾಯಾಲಯದ ತಡೆಯಾಜ್ಞೆ ಇದ್ದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ವಾದಿಯ ಅನುಪಸ್ಥಿತಿಯಲ್ಲಿ ರಾತ್ರೋರಾತ್ರಿ ನಾನು ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಮನೆ ನಿರ್ಮಾಣ ಮಾಡಲು ಆರಂಭಿಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಸೇರಿದ ಆಸ್ತಿಯಲ್ಲಿ ನಾನು ಮನೆ ಕಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

13. ದಾವಾ ಬಿ ಅನುಸೂಚಿ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ಕಾನೂನು ಬಾಹಿರವಾಗಿ ನಾನು ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೇ ಕಾಲಾವಕಾಶವನ್ನು ಕೊರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು.

**(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )**

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**